**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 12/2020

ಸಿಡಬ್ಲ್ಯೂ-5/ ಪಿಡಬ್ಲ್ಯೂ-1.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ದೇವರಾಜ |
| ತಂದೆಯ ಹೆಸರು | ಃ | ಪರಶುರಾಮ ಪಡುವಳ್ಳಿ |
| ವಯಸ್ಸು | ಃ | 39 ವರ್ಷ |
| ವೃತ್ತಿ | ಃ | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸ್ತವ್ಯ | ಃ | ಅಗಡಿ, ಮುಂಡಗೋಡ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 20 -07-2023.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

2019 ನೇ ಇಸ್ವಿಯಲ್ಲಿ ಕಲಘಟಗಿ-ಮುಂಡಗೋಡ ರಸ್ತೆಯಲ್ಲಿ ಧರ್ಮಣ್ಣ ಹೋಟೆಲಿನ ಪಕ್ಕದಲ್ಲಿ ಪೊಲೀಸರು ಪಂಚನಾಮೆ ಮಾಡುತ್ತಿದ್ದರು , ಆಗ ನಾಯಕ್ ಎಂಬುವವರು ಪೊಲೀಸರಿಗೆ ಸ್ಥಳ ತೋರಿಸುತ್ತಿದ್ದರು , ಅಲ್ಲಿ ಅಪಘಾತವಾಗಿತ್ತು. ಹಾಗೆ ಪೊಲೀಸರು ಪಂಚನಾಮೆ ಮಾಡುವ ಬಗ್ಗೆ ನನಗೆ ತಿಳಿಸಿರುತ್ತಾರೆ. ಆಗ ಚಾಸಾ 4 ರವರು ಜೊತೆಗೆ ಇದ್ದರು. ಹಾಗೆ ಸುಮಾರು ಸಂಜೆ 4 ರಿಂದ 5 ಗಂಟೆ ವರೆಗೆ ಮಹಜರ್ ಮಾಡಿರುತ್ತಾರೆ . ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಪಂಚನಾಮೆ ಆಗಿದ್ದು , ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.</u>**

ನಿಪಿ1 ಮಹಜರ್ ಮಾಡಿದಾಗ ಪೊಲೀಸರು ಸ್ಥಳ ನಕಾಶೆ ಮಾಡಿರುತ್ತಾರೆ ಎಂದರೆ ಸರಿ. ಹಾಗೆ ಸ್ಥಳದಲ್ಲಿ ಪೊಲೀಸರು ಫೋಟೋ ತೆಗೆದಿರುತ್ತಾರೆ ಎಂದರೆ ಸರಿ . ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ , ಅವುಗಳನ್ನು ಕ್ರಮವಾಗಿ ಸಾಕ್ಷಿ ಅಧಿನಿಯಮದ ಕಲಂ 65 ಬಿ ಯ ಅನ್ವಯಕ್ಕೆ ಒಳಪಟ್ಟು ನಿಪಿ2 ಮತ್ತು 3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ ಎ ಎನ್ ವಕೀಲರಿಂದಃ</u>**

ನಿಪಿ1 ಪಂಚನಾಮೆಯಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಮೃತ 2 ನೇ ಆರೋಪಿ ನನಗೆ ಸಂಬಂಧಿ

ಎಂದರೆ ಸರಿಯಲ್ಲ. ಮೃತ 2 ನೇ ಆರೋಪಿ ನನಗೆ ಸಂಬಂಧಿ ಆಗಿದ್ದರೂ ಸಹ ಈಗ ನಾನು ಸಂಬಂಧಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ನಿಪಿ1 ರಂತೆ ಪಂಚನಾಮೆ ಮಾಡದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಘಟನಾ ಸ್ಥಳದ ಚೆಕ್ಕುಬಂದಿ ಹೇಳಬಹುದು. ದಕ್ಷಿಣಕ್ಕೆ ಮುಂಡಗೋಡ ರಸ್ತೆ, ಪಶ್ಚಿಮಕ್ಕೆ ಧರ್ಮಣ್ಣ ರವರ ಹೊಲ, ಉತ್ತರಕ್ಕೆ ಕಲಘಟಗಿ ರಸ್ತೆ, ಪೂರ್ವಕ್ಕೆ ಧರ್ಮಣ್ಣ ರವರ ಹೋಟೆಲ್ ಇರುತ್ತದೆ. ಘಟನಾ ಸ್ಥಳದಲ್ಲಿದ್ದ ರಸ್ತೆ ಎಷ್ಟು ಅಗಲ ಇತ್ತು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳ ಮುಂಡಗೋಡ – ಕಲಘಟಗಿ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ಡಾಂಬಾರು ರಸ್ತೆ 30 ಫೂಟ್ ಅಗಲ ಇದೆ ಎಂದರೆ ಇರಬಹುದು. ಸದರಿ ರಸ್ತೆಯ ಎಡ ಮತ್ತು ಬಲಕ್ಕೆ ಕಚ್ಚಾ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಕಚ್ಚಾ ರಸ್ತೆಯ ಮುಂಡಗೋಡದಿಂದ ಕಲಘಟಗಿಗೆ ಹೋಗುವಾಗ ಎಡಕ್ಕೆ 2 ಫೂಟ್ , ಬಲಕ್ಕೆ ಅಂದಾಜು 10 ಫೀಟ್ ಕಚ್ಚಾ ಜಾಗ ಇರುತ್ತದೆ. ನನಗೆ ಘಟನಾ ಸ್ಥಳದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹ ಪೊಲೀಸರು ಹೇಳಿದ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

– sd–

**ಪ್ರ.ದ.ನ್ಯಾದಂ. ಮುಂಡಗೋಡ**